## ೦೮.೦೧.೨೦೧೩ರಂದು ನಡೆದ ಪ್ರಶಾಸನ ಸಮಿತಿ ೧೧ನೇ ಸಭೆಯ ನಡಾವಳಿ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ **ಪ್ರಶಾಸನ ಸಮಿತಿಯ ೧೧ನೇ ಸಭೆ**ಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಜನವರಿ ೦೮, ೨೦೧೩ರ ಮಂಗಳವಾರ ಬೆಳಿಗ್ಗೆ ೧೧.೦೦ ಗಂಟೆಗೆ ವಿಶ್ವವಿದ್ಯಾಲಯದ ಕಾರ್ಯಾಲಯದಲ್ಲಿ ನಡೆಯಿತು. ಈ ಸಭೆಯಲ್ಲಿ ಕೆಳಕಂಡ ಮಾನ್ಯ ಸದಸ್ಯರು ಹಾಜರಿದ್ದರು.

**ಹಾಜರಿದ್ದವರು:**

| | | |
|---|---|---|
| ೧. | **ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ,** ಮಾನ್ಯ ಕುಲಪತಿಗಳು | ಅಧ್ಯಕ್ಷರು |
| ೨. | **ಪಂ. ಜಯತೀರ್ಥಾಚಾರ್ಯ ಮಳಗಿ,** ಧಾರವಾಡ | ಸದಸ್ಯರು |
| ೩. | **ಪ್ರೊ. ಎನ್. ಅಶ್ವತ್ಥಮ್ಮ,** ಮೈಸೂರು | ಸದಸ್ಯರು |
| ೪. | **ಡಾ. ಸಿದ್ಧಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು,** ಕವಲೇದುರ್ಗ | ಸದಸ್ಯರು |
| ೫. | **ಡಾ. ಎಚ್.ಆರ್. ವಿಶ್ವಾಸ್,** ಮಂಗಳೂರು | ಸದಸ್ಯರು |
| ೬. | **ಡಾ. ಪಿ.ಬಿ. ಸಂತಪ್ಪನವರ,** ಗುಲಬರ್ಗಾ | ಸದಸ್ಯರು |
| ೭. | **ಡಾ. ಟಿ.ಎಸ್. ಸತ್ಯವತಿ,** ಬೆಂಗಳೂರು | ಸದಸ್ಯರು |
| ೮. | **ಶ್ರೀ ಡಿ. ಸುರೇಂದ್ರಕುಮಾರ್,** ಬೆಂಗಳೂರು | ಸದಸ್ಯರು |
| ೯. | **ಡಾ. ಎಸ್.ಆರ್. ಲೀಲಾ,** ಬೆಂಗಳೂರು | ಸದಸ್ಯರು |
| ೧೦. | **ಡಾ. ಶ್ರೀನಿವಾಸ ವರಖೇಡಿ,** ಡೀನ್, ಭಾಷಾ ನಿಕಾಯ | ಸದಸ್ಯರು |
| ೧೧. | **ಪ್ರೊ. ವೈ.ಎಸ್. ಸಿದ್ದೇಗೌಡ,** ಕುಲಸಚಿವರು | ಸದಸ್ಯ ಕಾರ್ಯದರ್ಶಿ |

**ಗೈರುಹಾಜರಿ:**

| | | |
|---|---|---|
| ೧. | **ಪ್ರಧಾನ ಕಾರ್ಯದರ್ಶಿಗಳು,** ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| ೨. | **ಅಪರ ಮುಖ್ಯ ಕಾರ್ಯದರ್ಶಿಗಳು,** ಹಣಕಾಸು ಇಲಾಖೆ, ಬೆಂಗಳೂರು | ಸದಸ್ಯರು |
| ೩. | **ಕಾರ್ಯದರ್ಶಿಗಳು,** ಕಂದಾಯ ಇಲಾಖೆ (ಧಾರ್ಮಿಕ ದತ್ತಿ ವಿಭಾಗ), ಬೆಂಗಳೂರು | ಸದಸ್ಯರು |
| ೪. | **ನಿರ್ದೇಶಕರು,** ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು | ಸದಸ್ಯರು |
| ೫. | **ಆಯುಕ್ತರು,** ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | ಸದಸ್ಯರು |
| ೬. | **ಪ್ರಾದೇಶಿಕ ನಿರ್ದೇಶಕರು,** ಯುಜಿಸಿ–ನೈರುತ್ಯ ಪ್ರಾದೇಶಿಕ ಕೇಂದ್ರ, ಬೆಂಗಳೂರು | ಸದಸ್ಯರು |
| ೭. | **ಶ್ರೀ ಜಿ. ಹನುಮಂತರಾಯಪ್ಪ,** ತುಮಕೂರು | ಸದಸ್ಯರು |

ಸಭೆಯ ಪ್ರಾರಂಭಕ್ಕೆ ಮಾನ್ಯ ಕುಲಪತಿಗಳು ಎಲ್ಲ ಗೌರವಾನ್ವಿತ ಸದಸ್ಯರನ್ನು ಸ್ವಾಗತಿಸಿದರು. ಸಭೆಯಲ್ಲಿ ಕೆಳಕಂಡ ಕಾರ್ಯಸೂಚಿಗಳು ಮಂಡಿತವಾಗಿ ನಿರ್ಣಯಗೊಂಡವು.

**ವಿಷಯ 1: ಪ್ರಶಾಸನ ಸಮಿತಿ ಹತ್ತನೇ ಸಭೆಯ ಅನುಪಾಲನಾ ವರದಿ.**

ಟಿಪ್ಪಣಿ: ದಿನಾಂಕ: 10.12.2012ರಂದು ನಡೆದ ವಿಶ್ವವಿದ್ಯಾಲಯದ ಪ್ರಶಾಸನ ಸಮಿತಿ ಹತ್ತನೇ ಸಭೆಯಲ್ಲಿ ಮಂಡಿತವಾದ ವಿಷಯಗಳನ್ನು ಕುರಿತು ನಿರ್ಣಯಿಸಿದಂತೆ ಕ್ರಮಕೈಗೊಳ್ಳಲಾದ ಅನುಪಾಲನಾ ವರದಿ.

**ವಿಷಯ ಸಂಖ್ಯೆ 4**ಕ್ಕೆ ಸಂಬಂಧಿಸಿದಂತೆ 8 ಜವಾನ ಮತ್ತು 2 ಕಾವಲುಗಾರ ಹುದ್ದೆಗಳಿಗೆ ನೇಮಕಾತಿಯನ್ನು ಮಾಡಕೊಳ್ಳಲಾಗಿದ್ದು, ಈ ಸಿಬ್ಬಂದಿಗಳು ಕರ್ತವ್ಯಕ್ಕೆ ವರದಿ ಮಾಡಿಕೊಂಡು ಕಾರ್ಯನಿರ್ವಹಿಸುತ್ತಿದ್ದಾರೆ. **ವಿಷಯ ಸಂಖ್ಯೆ 5**ಕ್ಕೆ ಸಂಬಂಧಿಸಿದಂತೆ ಕ್ರಮವಹಿಸಲಾಗುತ್ತಿದೆ.

ನಿರ್ಣಯ: **ಸಭೆಯು ಅನುಪಾಲನಾ ವಿವರಗಳನ್ನು ಗಮನಿಸಿ ಅನುಮೋದನೆಯನ್ನು ನೀಡಿತು.**

**ವಿಷಯ 2: 2010–11ನೇ ಸಾಲಿನ ವಾರ್ಷಿಕ ವರದಿಯ ಪರಿಶೀಲನೆ ಮತ್ತು ಅನುಮೋದನೆ ಬಗೆಗೆ.**

ಟಿಪ್ಪಣಿ: 2010–11ನೇ ಸಾಲಿನ ವಿಶ್ವವಿದ್ಯಾಲಯದ ಕಾರ್ಯಚಟುವಟಿಕೆಗಳ ವಾರ್ಷಿಕ ವರದಿಯನ್ನು ಸಿದ್ಧಪಡಿಸಲಾಗಿದೆ. ಈ ವಾರ್ಷಿಕ ವರದಿಯನ್ನು ವಿಧಾನಮಂಡಲಕ್ಕೆ ಸಲ್ಲಿಸಬೇಕಿದ್ದು, ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಸಭೆಯು 2010–11ನೇ ಸಾಲಿನ ವಾರ್ಷಿಕ ವರದಿಯನ್ನು ಗಮನಿಸಿತು. ಈ ವರದಿಯನ್ನು ವಿಧಾನಮಂಡಲಕ್ಕೆ ಸಲ್ಲಿಸಲು ಅನುಮೋದನೆಯನ್ನು ನೀಡಿತು.**

**ವಿಷಯ 3: ವಿಶ್ವವಿದ್ಯಾಲಯ ಅನುದಾನ ಆಯೋಗಕ್ಕೆ (ಯು.ಜಿ.ಸಿ) ಪ್ರಸ್ತಾವನೆ ಸಲ್ಲಿಸುವ ಬಗೆಗೆ.**

ಟಿಪ್ಪಣಿ: ವಿಶ್ವವಿದ್ಯಾಲಯ ಅನುದಾನ ಆಯೋಗ(ಯು.ಜಿ.ಸಿ)ವು ನೂತನವಾಗಿ ಪ್ರಾರಂಭಗೊಂಡ ವಿಶ್ವವಿದ್ಯಾಲಯಗಳಿಗೆ **One Time Catch up Grant** ಅಡಿ ರೂ. 5 ಕೋಟಿ ಧನಸಹಾಯ ನೀಡುತ್ತದೆ. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು 2010ರಲ್ಲಿ ಅಸ್ತಿತ್ವಕ್ಕೆ ಬಂದ ಕಾರಣ ಈ ಅನುದಾನ ಪಡೆಯಲು ಅರ್ಹವಾಗಿರುತ್ತದೆ. ಈ ಅನುದಾನವನ್ನು ಪಡೆಯಲು ಸೂಕ್ತ ಪ್ರಸ್ತಾವನೆಯನ್ನು ಸಿದ್ಧಪಡಿಸಲಾಗಿದ್ದು, ವಿಶ್ವವಿದ್ಯಾಲಯ ಅನುದಾನ ಆಯೋಗಕ್ಕೆ ಕಳುಹಿಸಲು ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಸಭೆಯು ತನ್ನ ಸಂತೋಷವನ್ನು ವ್ಯಕ್ತಪಡಿಸಿತು. ಆದಷ್ಟೂ ಬೇಗ ಅನುದಾನ ಪಡೆದು ಅಭಿವೃದ್ಧಿ ಕಾರ್ಯವನ್ನು ನಿರ್ವಹಿಸಲು ಸೂಚಿಸಿ ಅನುಮೋದಿಸಿತು.**

**ವಿಷಯ 4: ದತ್ತಿನಿಧಿಯನ್ನು ಸ್ಥಿರನಿಧಿ ಠೇವಣಿಯಾಗಿ ಸ್ಥಾಪಿಸುವ ಬಗೆಗೆ**

ಟಿಪ್ಪಣಿ: ಸಂಸ್ಕೃತ ವಿಷಯಕ್ಕೆ ಸಂಬಂಧಿಸಿದಂತೆ 1926ರಿಂದ ರಾಜ್ಯ ಹುಜೂರ್ ಖಜಾನೆಯಲ್ಲಿರಿಸಿದ್ದ ದತ್ತಿನಿಧಿಗಳ ಮೊತ್ತ ರೂ. 3,32,391/– (ಮೂರು ಲಕ್ಷದ ಮೂವತ್ತೆರಡು ಸಾವಿರ ಮೂರುನೂರ ತೊಂಭತ್ತೊಂದು ಮಾತ್ರ)ಗಳನ್ನು ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿಯು ದತ್ತಿನಿಧಿ ಸ್ಥಾಪಿಸಿದ ಮಹಾನುಭಾವರ ವಿವರಗಳೊಂದಿಗೆ ಪಟ್ಟಿ ಮಾಡಿ ವಿಶ್ವವಿದ್ಯಾಲಯಕ್ಕೆ ಕಳುಹಿಸಿರುತ್ತಾರೆ. ವಿಶ್ವವಿದ್ಯಾಲಯದಲ್ಲಿ ಈಗಾಗಲೇ ಕೆಲವು ಶಾಸ್ತ್ರಗಳಿಗೆ ಸಂಬಂಧಿಸಿದಂತೆ ಒಂದು ಲಕ್ಷ ರೂ.ಗಳ ದತ್ತಿನಿಧಿಗಳನ್ನು ನೀಡಲಾಗಿದ್ದು, ಆ ಮೊತ್ತವನ್ನು ಬ್ಯಾಂಕಿನಲ್ಲಿ ಸ್ಥಿರನಿಧಿ ಠೇವಣಿಯಾಗಿಡಲಾಗಿದೆ. ಅದರಂತೆಯೇ **ರೂ. 3,32,391/–**ಗಳನ್ನು ಸ್ಥಿರನಿಧಿಯಾಗಿಡಲು ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಸಭೆಯು 3,32,391/– ರೂ.ಗಳನ್ನು ಸ್ಥಿರನಿಧಿಯಾಗಿ ಇಡುವುದರ ಬಗೆಗೆ ಒಪ್ಪಿಗೆ ಸೂಚಿಸಿತು. ಈ ಸ್ಥಿರನಿಧಿಯನ್ನು ಸೂಕ್ತ ರೀತಿಯಿಂದ ಬಳಕೆ ಮಾಡಲು ಪ್ರಶಿಕ್ಷಣ ಪರಿಷತ್ತಿನಿಂದ ಅನುಮೋದನೆ ಪಡೆಯಲು ಸೂಚಿಸಿತು.**

**ವಿಷಯ 5: 2013–14ನೇ ಸಾಲಿನಿಂದ ಪಿಎಚ್.ಡಿ. ಪದವಿಯನ್ನು ಪ್ರಾರಂಭಿಸುವ ಬಗೆಗೆ.**

ಟಿಪ್ಪಣಿ: ಅಧ್ಯಾಯ 5ರ ಶಾಸನಗಳು ಶೀರ್ಷಿಕೆಯ ಪರಿಚ್ಛೇದ 38(5)ರ ಅವಕಾಶಗಳನ್ವಯ ಸಂಸ್ಕೃತ ಭಾಷೆ, ಸಾಹಿತ್ಯ ಹಾಗೂ ನಾನಾ ಶಾಸ್ತ್ರಗಳಲ್ಲಿ, ವೇದ–ವೇದಾಂತ–ವೇದಾಂಗಶಾಸ್ತ್ರಗಳಲ್ಲಿ ಮತ್ತಿತರ ಸಂಬಂಧಿತ ವಿಷಯಗಳಲ್ಲಿ ವಿಶ್ವವಿದ್ಯಾಲಯವು ಸಂಶೋಧನೆ ಹಾಗೂ ಮಾರ್ಗದರ್ಶನವನ್ನು ಮಾಡಬೇಕಾಗಿದೆ. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಪಿಎಚ್.ಡಿ.ಗೆ ಸಂಬಂಧಿಸಿದಂತೆ ದಿನಾಂಕ: 14, 15 ಮತ್ತು 16, ಡಿಸೆಂಬರ್ 2010ರಂದು ನಡೆದ ಎಂ.ಫಿಲ್., ಪಿಎಚ್.ಡಿ. ಮತ್ತು ಡಿ.ಲಿಟ್. ಪದವಿಗಳ ನಿಯಮಾವಳಿ ಸಮಿತಿ ಸಭೆಯಲ್ಲಿ ಪಿಎಚ್.ಡಿ. ನಿಯಮಾವಳಿಗಳನ್ನು ತಾತ್ಪೂರ್ತಿಕವಾಗಿ ರೂಪಿಸಿತ್ತು. ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, ಬೆಂಗಳೂರು ಇವರು ದಿನಾಂಕ: 16.11.2011ರ ಐದನೆಯ ಸಾಮಾನ್ಯ ಸಭೆಯಲ್ಲಿ ಉನ್ನತ ಶಿಕ್ಷಣಕ್ಕೆ ಒತ್ತು ಕೊಡುವಂತೆ ಚರ್ಚಿಸಿದ ಮೇರೆಗೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪಿಎಚ್.ಡಿ. ಪದವಿಯನ್ನು 2013–14ನೇ ಸಾಲಿನಲ್ಲಿ ಪ್ರಾರಂಭಿಸಬೇಕಾಗಿದೆ. ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಸಭೆಯು 2013–14ನೇ ಸಾಲಿನಿಂದ ಸಂಸ್ಕೃತದಲ್ಲಿ ಪಿಎಚ್.ಡಿ. ಪದವಿಯನ್ನು ಪ್ರಾರಂಭಿಸಲು ಅನುಮೋದನೆಯನ್ನು ನೀಡಿತು.**

**ವಿಷಯ 6: ಸೋಮನಾಥ ಸಂಸ್ಕೃತ ವಿಶ್ವವಿದ್ಯಾಲಯದ ಜೊತೆಗೆ MOU ಮಾಡಿಕೊಳ್ಳುವ ಬಗೆಗೆ**

ಟಿಪ್ಪಣಿ: 2005ರಲ್ಲಿ ಪ್ರಾರಂಭವಾದ ಸೋಮನಾಥ ಸಂಸ್ಕೃತ ವಿಶ್ವವಿದ್ಯಾಲಯವು ಈಗಾಗಲೇ ಹೆಸರುವಾಸಿಯಾಗಿದೆ. ಅಲ್ಲಿಯ ಕುಲಪತಿಗಳಾದ ಪ್ರೊ. ವಿ. ಕುಟುಂಬಶಾಸ್ತ್ರಿಗಳ ಸಮರ್ಥ ನೇತೃತ್ವದಲ್ಲಿ ಆ ವಿಶ್ವವಿದ್ಯಾಲಯವು ಮುನ್ನಡೆಯುತ್ತಿದೆ. ಸೋಮನಾಥ ಸಂಸ್ಕೃತ ವಿಶ್ವವಿದ್ಯಾಲಯದ ಜೊತೆಗೆ 'ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಅಧಿನಿಯಮ 2ನೇ ಅಧ್ಯಾಯ, 5ನೇ ಪರಿಚ್ಛೇದ'ದ ಅಡಿಯಲ್ಲಿ ದತ್ತವಾದ ಅಧಿಕಾರದಂತೆ MOU ಮಾಡಿಕೊಳ್ಳುವುದರಿಂದ ವಿಶ್ವವಿದ್ಯಾಲಯದ ಸಂಯೋಜಿತ ಕಾಲೇಜುಗಳ ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳು NLP, PGDCA ಮುಂತಾದ ಕೋರ್ಸುಗಳಲ್ಲಿ ಭಾಗವಹಿಸಲು ಅನುಕೂಲವಾಗುತ್ತದೆ. ನಮ್ಮ ವಿಶ್ವವಿದ್ಯಾಲಯದಿಂದ ಅಧ್ಯಾಪಕರು ಅಲ್ಲಿಗೆ ತೆರಳಿ ಲಾಭಾನ್ವಿತರಾಗುತ್ತಾರೆ. ಈ ಹಿನ್ನೆಲೆಯಲ್ಲಿ ಎರಡೂ ವಿಶ್ವವಿದ್ಯಾಲಯಗಳ ಶೋಧನೆ, ವಿದ್ವಾಂಸರ ಆಧಾನ–ಪ್ರದಾನ, ರಾಷ್ಟ್ರೀಯ ವಿಚಾರಸಂಕಿರಣಗಳನ್ನು ಹಮ್ಮಿಕೊಳ್ಳಬಹುದಾಗಿದೆ. ಸಭೆಯ ಅನುಮೋದನೆ ಕೋರಿದೆ.

ನಿರ್ಣಯ: **ಸಭೆಯು ಸೋಮನಾಥ ಸಂಸ್ಕೃತ ವಿಶ್ವವಿದ್ಯಾಲಯದೊಡನೆ MOU ಮಾಡಿಕೊಳ್ಳುವ ಪ್ರಕ್ರಿಯೆಗೆ ಹರ್ಷವನ್ನು ವ್ಯಕ್ತಪಡಿಸಿತು. ಈ ಅಂಶಕ್ಕೆ ತನ್ನ ಅನುಮೋದನೆಯನ್ನು ನೀಡಿತು.**

**ವಿಷಯ 7: ಯೋಜನಾ ಸಹಾಯಕ ಹುದ್ದೆಗಳ ನೇಮಕಾತಿ ಅನುಮೋದಿಸುವ ಬಗೆಗೆ**

ಟಿಪ್ಪಣಿ: ದಿನಾಂಕ: 31.08.2012ರಂದು ನಡೆದ ಪ್ರಶಾಸನ ಸಮಿತಿ ಆರನೇ ಸಭೆಯ ನಿರ್ಣಯದಂತೆ 'ಎ', 'ಬಿ' ಮತ್ತು 'ಸಿ' ವರ್ಗದ ಹುದ್ದೆಗಳಿಗೆ ಒಟ್ಟು 25 ಅಂಕಗಳನ್ನು ಹಾಗೂ 'ಡಿ' ವರ್ಗದ ಹುದ್ದೆಗೆ 10 ಅಂಕಗಳನ್ನು ನಿರ್ದಿಷ್ಟೀಕರಿಸಿಕೊಂಡು ದಿನಾಂಕ: 2013ಡಿ ಜನವರಿ 04 ಮತ್ತು 05ರಂದು ರಾಜ್ಯ ವೇತನಶ್ರೇಣಿಯ ಬೋಧಕ **ಯೋಜನಾ ಸಹಾಯಕ** ಹುದ್ದೆಯ ನೇಮಕಾತಿಗಾಗಿ ಸಂದರ್ಶನವನ್ನು ನಡೆಸಲಾಯಿತು. ಈ ಸಂದರ್ಶನದಲ್ಲಿ ಆಯ್ಕೆಯಾದ ಅಭ್ಯರ್ಥಿಗಳನ್ನು ನೇಮಕ ಮಾಡಿಕೊಳ್ಳಲು ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ರಾಜ್ಯ ವೇತನಶ್ರೇಣಿಯ ಬೋಧಕ 'ಯೋಜನಾ ಸಹಾಯಕ (ಶೈಕ್ಷಣಿಕ)' ಹುದ್ದೆಗಳಿಗೆ ದಿನಾಂಕ: 04 ಮತ್ತು 05, ಜನವರಿ 2013ರಂದು ನಡೆದ 'ಆಯ್ಕೆ ಸಮಿತಿ' ಸಭೆಯ ಶಿಫಾರಸ್ಸುಗಳನ್ನು ಸಂಪೂರ್ಣವಾಗಿ ಪರಿಶೀಲಿಸಿತು. ಆಯಾಯ ಹುದ್ದೆಗಳಿಗೆ ಬೇಕಾಗುವ ಸೇವಾ ಅನುಭವ, ಜ್ಯೇಷ್ಠತೆ ಮತ್ತು ಶೈಕ್ಷಣಿಕ ಅರ್ಹತೆಯನ್ನು ಕ್ರಮಾನುಸಾರವಾಗಿ ಪರಿಗಣಿಸಿ ಆಯ್ಕೆಗೊಂಡಿರುವ ಅಭ್ಯರ್ಥಿಗಳಿಗೆ ಸಭೆಯು ತನ್ನ ಅನುಮೋದನೆಯನ್ನು ನೀಡಿತು.**

| ಕ್ರಸಂ. | ಹುದ್ದೆಯ ಪದನಾಮ | ಆಯ್ಕೆಗೊಂಡ ಅಭ್ಯರ್ಥಿಗಳು | ಮೀಸಲಾತಿ |
|---|---|---|---|
| 01. | ಯೋಜನಾ ಸಹಾಯಕ (ಶೈಕ್ಷಣಿಕ) | **ಆರ್. ತಿಮ್ಮಣ್ಣ**<br>ರಮಾನಂದನಗರ, ಜಿ. ನಾಗತಿಹಳ್ಳಿ ಪೋ., ಬೆಳ್ಳೂರು ಹೋ., ನಾಗಮಂಗಲ ತ. ಮಂಡ್ಯ ಜಿಲ್ಲೆ 571811 | ಪರಿಶಿಷ್ಟ ಜಾತಿ (ಇತರೆ) |
| 02. | ಯೋಜನಾ ಸಹಾಯಕ (ಶೈಕ್ಷಣಿಕ) | **ಉದಯನ ಹೆಗಡೆ**<br>ಅಕ್ಷರಂ, 8ನೇ ಅಡ್ಡರಸ್ತೆ, 2ನೇ ಹಂತ ಗಿರಿನಗರ, ಬೆಂಗಳೂರು 85 | ಸಾಮಾನ್ಯ (ಇತರೆ) |
| 03. | ಯೋಜನಾ ಸಹಾಯಕ (ಶೈಕ್ಷಣಿಕ) | – | ಪರಿಶಿಷ್ಟ ಪಂಗಡ |
| 04. | ಯೋಜನಾ ಸಹಾಯಕ (ಶೈಕ್ಷಣಿಕ) | **ಹೆಚ್.ಕೆ. ಶ್ರುತಿ**<br>ಮನೆ.ನಂ.4, ಗಣಪತಿ ಕೃಪಾ, ನ್ಯೂ ಡಿಸೋಜ ನಗರ, ಹೊಸಕೆರೆ ಹಳ್ಳಿ ಬನಶಂಕರಿ, 3ನೇ ಹಂತ, ಬೆಂಗಳೂರು 85 | ಸಾಮಾನ್ಯ (ಮಹಿಳೆ) |
| 05. | ಯೋಜನಾ ಸಹಾಯಕ (ಶೈಕ್ಷಣಿಕ) | **ಕೆ.ಕೆ. ರಾಜಶೇಖರ**<br>ತಂದೆ: ಕಲುವೀರಯ್ಯ, ಕಾಡಬೆಟ್ಟನಹಳ್ಳಿ, ಕೊಡಿಯಾಲ ಪೋ., ಚೇಳೂರು ಹೋ., ಗುಬ್ಬಿ ತಾ, ತುಮಕೂರು ಜಿಲ್ಲೆ 577518 | ಪ್ರವರ್ಗ–1 |
| 06. | ಯೋಜನಾ ಸಹಾಯಕ (ಶೈಕ್ಷಣಿಕ) | **ಕೆ.ಎಲ್. ರಾಘವ**<br>#641/ಎ, 5ನೇ ಮೇನ್, 3ನೇ ಕ್ರಾಸ್, ಮಾರುತಿ ಗುಡಿ ಹತ್ತಿರ, ಕಮಲೇಶ ಆಸ್ಪತ್ರೆ ಹಿಂಭಾಗ, ಸರಸ್ವತಿಪುರಂ, ಮೈಸೂರು–09 | ಸಾಮಾನ್ಯ (ಗ್ರಾಮೀಣ) |
| 07. | ಯೋಜನಾ ಸಹಾಯಕ (ಶೈಕ್ಷಣಿಕ) | – | ಪ್ರವರ್ಗ–2ಎ |
| 08. | ಯೋಜನಾ ಸಹಾಯಕ (ಶೈಕ್ಷಣಿಕ) | **ಡಿ. ತೇಜಸ್ವಿನಿ**<br>4205/7, ಬಂಬ್ಕಿ ನಿವಾಸ, 1ನೇ ಮಹಡಿ, 1ನೇ ಮುಖ್ಯರಸ್ತೆ, ಸುಬ್ರಹ್ಮಣ್ಯನಗರ, ಬೆಂಗಳೂರು 560 021 | ಸಾಮಾನ್ಯ (ಅಂಗವಿಕಲ) |
| 09. | ಯೋಜನಾ ಸಹಾಯಕ (ಶೈಕ್ಷಣಿಕ) | **ಹೆಚ್.ಪಿ. ಜ್ಯೋತಿ**<br>C/o. ರಾಮಕೃಷ್ಣ ಹೆಚ್.ಕೆ., ಶ್ರೀ ರಾಘವೇಂದ್ರ ನಿಲಯ, 3ನೇ ಮುಖ್ಯರಸ್ತೆ, 7ನೇ ಅಡ್ಡರಸ್ತೆ, ಹೇಮಾವತಿ ನಗರ, ಹಾಸನ | ಪರಿಶಿಷ್ಟ ಜಾತಿ (ಮಹಿಳೆ) |
| 10. | ಯೋಜನಾ ಸಹಾಯಕ (ಶೈಕ್ಷಣಿಕ) | **ಶಕುಂತಲಾ ಭಟ್**<br>ಅತಿಥಿ ಉಪನ್ಯಾಸಕರು, ಸಂಸ್ಕೃತ ವಿಭಾಗ, ಸಹ್ಯಾದ್ರಿ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಶಿವಮೊಗ್ಗ | ಸಾಮಾನ್ಯ (ಮಹಿಳೆ) |

**ಪರಿಶಿಷ್ಟ ಪಂಗಡ ಹಾಗೂ ಪ್ರವರ್ಗ 2ಎ –ಈ ಹುದ್ದೆಗಳಿಗೆ ಸೂಕ್ತ ಅಭ್ಯರ್ಥಿಗಳು ಇಲ್ಲದಿರುವ ಹಿನ್ನೆಲೆಯಲ್ಲಿ ಮತ್ತೊಮ್ಮೆ ಅಧಿಸೂಚನೆಯನ್ನು ಹೊರಡಿಸಿ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಕ್ರಮಕೈಗೊಳ್ಳಬಹುದೆಂದು ಸಭೆ ಸೂಚಿಸಿತು. ನೇಮಕಾತಿ ಹೊಂದಿರುವವರು ನೇಮಕಾತಿ ಆದೇಶ ಹೊರಡಿಸಿದ ಒಂದು ವಾರದ ಒಳಗೆ ಕರ್ತವ್ಯಕ್ಕೆ ಹಾಜರಾಗಲು ಸಭೆಯು ಸೂಚಿಸಿತು ಹಾಗು ಈಗಾಗಲೇ ಖಾಲಿ ಇರುವ ವಿವಿಧ ಹುದ್ದೆಗಳಿಗೆ ಅಧಿಸೂಚನೆಯನ್ನು ಹೊರಡಿಸಿ ಹುದ್ದೆಗಳನ್ನು ನಿಯಮಾನುಸಾರ ಭರ್ತಿ ಮಾಡಿಕೊಳ್ಳಲು ಒಪ್ಪಿಗೆ ಸೂಚಿಸಿತು.**

### ವಿಷಯ 8: ವಿಶ್ವವಿದ್ಯಾಲಯದ ಕ್ಯಾಲೆಂಡರ್‌ಅನ್ನು ಮುದ್ರಣ ಮಾಡಿಸುವ ಬಗೆಗೆ.

ಟಿಪ್ಪಣಿ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಸ್ಥಾಪನೆಗೊಂಡು ಈಗಾಗಲೇ ಎರಡು ವರ್ಷಗಳನ್ನು ಪೂರೈಸಿದೆ. ಈ ಹಿನ್ನೆಲೆಯಲ್ಲಿ ವಿಶ್ವವಿದ್ಯಾಲಯದ ಕಾರ್ಯಚಟುವಟಿಕೆಗಳ ಮಾಹಿತಿಯನ್ನೊಳಗೊಂಡ 15x20ಇಂಚು ಅಳತೆಯ ಆರು ಪುಟಗಳ ಬಹುವರ್ಣದ ಕ್ಯಾಲೆಂಡರ್ ಮುದ್ರಿಸಲು ನಿರ್ಧರಿಸಲಾಗಿದೆ. 1000 ಕ್ಯಾಲೆಂಡರ್‌ಗಳ ಮುದ್ರಣಕ್ಕೆ ಅಂದಾಜು **ರೂ. 60,000/–** ವೆಚ್ಚವಾಗಲಿದೆ. ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಸಭೆಯು ವಾರ್ಷಿಕ ಕ್ಯಾಲೆಂಡರ್‌ಅನ್ನು ನೋಡಿ ಮುದ್ರಣ ಮತ್ತು ವಿನ್ಯಾಸದ ಬಗೆಗೆ ಹರ್ಷವನ್ನು ವ್ಯಕ್ತಪಡಿಸಿತು. ಅಂದಾಜು ವೆಚ್ಚಕ್ಕೆ ತನ್ನ ಅನುಮೋದನೆಯನ್ನು ನೀಡಿತು.**

## ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು:

### ವಿಷಯ 1: ಘಟಕ ಕಾಲೇಜುಗಳ ಬೋಧಕ–ಬೋಧಕೇತರ ಸಿಬ್ಬಂದಿಗಳ ಸೇವಾವಿಲೀನೀಕರಣ ಪರಿನಿಯಮವನ್ನು ಅನುಮೋದಿಸುವ ಬಗೆಗೆ.

ಟಿಪ್ಪಣಿ: ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜು, ಬೆಂಗಳೂರು ಮತ್ತು ಮಹಾರಾಜ ಸಂಸ್ಕೃತ ಕಾಲೇಜು, ಮೈಸೂರು–ಈ ಎರಡೂ ಕಾಲೇಜುಗಳನ್ನು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಘಟಕ ಕಾಲೇಜುಗಳಾಗಿ ವರ್ಗಾಯಿಸಿರುವ ಹಿನ್ನೆಲೆಯಲ್ಲಿ ಈ ಕಾಲೇಜುಗಳ ಬೋಧಕ–ಬೋಧಕೇರ ಸಿಬ್ಬಂದಿಗಳ ಸೇವೆಯನ್ನು ವಿಶ್ವವಿದ್ಯಾಲಯದಲ್ಲಿ ವಿಲೀನಗೊಳಿಸುವ ಸಂಬಂಧವಾಗಿ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ವಿಧೇಯಕ 2000ದ ಉಪನಿಯಮ 82ರಂತೆ 'ಘಟಕ ಕಾಲೇಜುಗಳ ಸೇವಾವಿಲೀನೀಕರಣ ಪರಿನಿಯಮ–2013'ಅನ್ನು ಸಿದ್ಧಪಡಿಸಲಾಗಿದ್ದು, ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: ಪರಿನಿಯಮವನ್ನು ಸಿದ್ಧಪಡಿಸಿದ ಸಮಿತಿಯ ಅಧ್ಯಕ್ಷರಾದ ಪ್ರೊ. ಎನ್. ಅಶ್ವತ್ಥಮ್ಮ ಅವರು ಸಭೆಯ ಮುಂದೆ ವರದಿಯನ್ನು ಮಂಡಿಸಿದರು. ಸಭೆಯು ಆಮೂಲಾಗ್ರವಾಗಿ **'ಘಟಕ ಕಾಲೇಜುಗಳ ಸೇವಾವಿಲೀನೀಕರಣ ಪರಿನಿಯಮ-2013'**ಅನ್ನು ಪರಿಶೀಲಿಸಿ, ತನ್ನ ಅನುಮೋದನೆಯನ್ನು ನೀಡಿತು.

**ವಿಷಯ 2: ಎಂ.ಫಿಲ್ ವಿದ್ಯಾರ್ಥಿಗಳ ಮಾರ್ಗದರ್ಶಕರ ಪಟ್ಟಿಯನ್ನು ಅನುಮೋದಿಸುವ ಬಗೆಗೆ.**

ಟಿಪ್ಪಣಿ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಎಂ.ಫಿಲ್‌ನ ಬೋಧನ ತರಗತಿಗಳು ಮುಗಿದಿದ್ದು, ಎಂ.ಫಿಲ್ ವಿದ್ಯಾರ್ಥಿಗಳು ತಮ್ಮ ಲಘುಶೋಧ ಪ್ರಬಂಧವನ್ನು ಮಂಡಿಸಬೇಕಾಗಿದೆ. ಇದಕ್ಕಾಗಿ ಸಮರ್ಥ ಮಾರ್ಗದರ್ಶಕರ ಅಗತ್ಯವಿದ್ದು, ಎಂ.ಫಿಲ್ (ವಿಶಿಷ್ಟಾಚಾರ್ಯ) ಅಧ್ಯಯನ ನಿಯಮಾವಳಿಯ ಕ್ರ.ಸಂ. 16ರ ಪ್ರಕಾರ ಮಾರ್ಗದರ್ಶಕರ ಪಟ್ಟಿಯನ್ನು ಸಿದ್ಧಪಡಿಸಲಾಗಿದೆ. ಸಭೆಯ ಅನುಮೋದನೆಗಾಗಿ ಮಂಡಿಸಿದೆ.

| ಕ್ರ. ಸಂ. | ಹೆಸರು | ಅಧ್ಯಾಪನ ಮಾಡುತ್ತಿರುವ ಶಾಸ್ತ್ರ | ವರ್ಷ | ಪಿ.ಎಚ್‌ಡಿ ಪದವಿ ನೀಡಿದ ವಿಶ್ವವಿದ್ಯಾಲಯ |
|---|---|---|---|---|
| 1. | **ಡಾ. ಎಂ.ಎ. ಆಳ್ವಾರ್**<br>ಸಹಾಯಕ ಪ್ರಾಧ್ಯಾಪಕರು, ಮಹಾರಾಜ ಸಂಸ್ಕೃತ ಕಾಲೇಜು, ನ್ಯೂ ಸಯ್ಯಾಜಿರಾವ್ ರಸ್ತೆ, ಮೈಸೂರು-570 024<br>ಮೊ: 98801-56970 | **ನವೀನನ್ಯಾಯಶಾಸ್ತ್ರ** | 1997 | ರಾಷ್ಟ್ರೀಯ ಸಂಸ್ಕೃತ ವಿದ್ಯಾಪೀಠ, ತಿರುಪತಿ |
| 2. | **ಡಾ. ಪ್ರಭುಲಿಂಗ ಹೆಬ್ಬಾಳ**<br>ಸಹಾಯಕ ಪ್ರಾಧ್ಯಾಪಕರು<br>ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜು<br>ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ,<br>ಬೆಂಗಳೂರು-560 018, ಮೊ: 9731004160 | **ವ್ಯಾಕರಣಶಾಸ್ತ್ರ** | 2001-02 | ಬೆಂಗಳೂರು ವಿಶ್ವವಿದ್ಯಾಲಯ |
| 3. | **ಡಾ. ಎಂ. ಪವಮಾನಾಚಾರ್ಯ**<br>ಸಹಾಯಕ ಪ್ರಾಧ್ಯಾಪಕರು<br>ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜು<br>ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ,<br>ಬೆಂಗಳೂರು-560 018,<br>ಮೊ: 94484-70427 | **ನವೀನನ್ಯಾಯಶಾಸ್ತ್ರ** | 2001-02 | ರಾಷ್ಟ್ರೀಯ ಸಂಸ್ಕೃತ ವಿದ್ಯಾಪೀಠ, ತಿರುಪತಿ |
| 4. | **ಡಾ. ಈ.ಜಿ. ವೆಂಕಟೇಶನ್**<br>ಪ್ರಾಧ್ಯಾಪಕರು-ಸರ್ಕಾರಿ ಸಂಸ್ಕೃತ ಕಾಲೇಜು<br>ಮೇಲುಕೋಟೆ, ನಾಗಮಂಗಲ ತಾಲ್ಲೂಕು<br>ಮಂಡ್ಯ ಜಿಲ್ಲೆ-571 431, ಮೊ: 98452-54470<br>E-Mail: ejvenkateshan@gmail.com | **ಧರ್ಮಶಾಸ್ತ್ರ** | 2003 | ಮೈಸೂರು ವಿಶ್ವವಿದ್ಯಾಲಯ, ಮೈಸೂರು |
| 5. | **ಡಾ. ಲಕ್ಷ್ಮೀಕಾಂತ್ ವಿ. ಮೊಹರೀರ**<br>ಸಂಸ್ಕೃತ ಪ್ರಾಧ್ಯಾಪಕರು<br>ಆಯುರ್ವೇದ, ಮೆಡಿಕಲ್ ಕಾಲೇಜು<br>ಇಂಚಲ, ಬೆಳಗಾವಿ ಜಿಲ್ಲೆ<br>ಮೊ: 99862-35889/98450-47635 | **ಸಾಹಿತ್ಯ** | 2004 | ಗುಲ್ಬರ್ಗಾ ವಿಶ್ವವಿದ್ಯಾಲಯ |
| 6. | **ಡಾ. ಕೆ.ಎಂ. ಮಹದೇವಯ್ಯ**<br>ಪ್ರಾಧ್ಯಾಪಕರು-ಮಹಾರಾಜ ಸಂಸ್ಕೃತ ಕಾಲೇಜು, ನ್ಯೂ ಸಯ್ಯಾಜಿರಾವ್ ರಸ್ತೆ, ಮೈಸೂರು-570 024<br>ಮೊ: 99800-57563 | **ಶಕ್ತಿವಿಶಿಷ್ಟಾದ್ವೈತ ವೇದಾಂತ** | 2005 ಜನವರಿ | ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು |
| 7. | **ಡಾ. ಭಾಷ್ಯಂಸ್ವಾಮಿ**<br>ಪ್ರಭಾರಿ ಪ್ರಾಚಾರ್ಯರು<br>ಮಹಾರಾಜ ಸಂಸ್ಕೃತ ಕಾಲೇಜು<br>ನ್ಯೂ ಸಯ್ಯಾಜಿರಾವ್ ರಸ್ತೆ, ಮೈಸೂರು-570 024<br>ಮೊ: 96637-77777 | **ಕೃಷ್ಣಯಜುರ್ವೇದ** | 2006 ಜನವರಿ | Open International University for Complimentary Medicine, Colombo |
| 8. | **ಡಾ. ಕೃಷ್ಣಮೂರ್ತಿ ಬಾಯರಿ**<br>ಸಹಾಯಕ ಪ್ರಾಧ್ಯಾಪಕರು<br>ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜು<br>ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ,<br>ಬೆಂಗಳೂರು-560 018,<br>ಮೊ: 94488-47231 | **ಅಲಂಕಾರಶಾಸ್ತ್ರ** | 2006-07 | ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು |
| 9. | **ಡಾ. ಎನ್. ಗೀತಾ**<br>ಸಾಹಿತ್ಯ ಸಹಾಯಕರು<br>ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜು<br>ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ,<br>ಬೆಂಗಳೂರು-560 018,<br>ಮೊ: 89718-78958 | **ಅಲಂಕಾರಶಾಸ್ತ್ರ** | 2009 | ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು |
| 10. | **ಡಾ. ಸಿ. ಶಿವಕುಮಾರಸ್ವಾಮಿ**<br>ಸಂಸ್ಕೃತ ವಿಭಾಗಾಧ್ಯಕ್ಷರು<br>ಬಸವೇಶ್ವರ ಪದವಿ ಕಾಲೇಜು<br>ರಾಜಾಜಿನಗರ 2ನೇ ಹಂತ, ಬೆಂಗಳೂರು10 | **ಅಲಂಕಾರಶಾಸ್ತ್ರ** | 1995 | ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು |
| 11. | **ಡಾ. ಕೃಷ್ಣಮೂರ್ತಿ ಕೂರ್ಸೆ**<br>ಶ್ರೀ ಕಾಲಭೈರವೇಶ್ವರ ಸಂಸ್ಕೃತ ವೇದ-ಆಗಮ ಕಾಲೇಜು, ಶ್ರೀ ಆದಿಚುಂಚನಗಿರಿ ಕ್ಷೇತ್ರ, ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆ<br>9448802831 | **ಅದ್ವೈತವೇದಾಂತ** | 1998 | ತಿರುಪತಿ ಕೇಂದ್ರೀಯ ಸಂಸ್ಕೃತ ವಿಶ್ವವಿದ್ಯಾಲಯ |

| | | | | |
|---|---|---|---|---|
| 12. | **ಡಾ. ಹೆಚ್. ಸತ್ಯನಾರಾಯಣ ರಾವ್**<br>ಸಹಾಯಕ ಪ್ರಾಧ್ಯಾಪಕರು<br>ಶ್ರೀ ಪೂರ್ಣಪ್ರಜ್ಞ ವಿದ್ಯಾಪೀಠ ಸಂಸ್ಕೃತ ಕಾಲೇಜು ಕತ್ತರಿಗುಪ್ಪೆ,<br>ಬೆಂಗಳೂರು–560028 | **ದ್ವೈತವೇದಾಂತ** | 2002 | ರಾಷ್ಟ್ರೀಯ ಸಂಸ್ಕೃತ ಸಂಸ್ಥಾನ, ದೆಹಲಿ |
| 13. | **ಡಾ. ತಿರುಮಲ ಅಲಿಯಾಸ್ ಜಯತೀರ್ಥ**<br>ಸಹಾಯಕ ಪ್ರಾಧ್ಯಾಪಕರು<br>ಶ್ರೀ ಪೂರ್ಣಪ್ರಜ್ಞ ವಿದ್ಯಾಪೀಠ ಸಂಸ್ಕೃತ ಕಾಲೇಜು ಕತ್ತರಿಗುಪ್ಪೆ,<br>ಬೆಂಗಳೂರು–560028 | **ಅಲಂಕಾರಶಾಸ್ತ್ರ** | 2008 | ರಾಷ್ಟ್ರೀಯ ಸಂಸ್ಕೃತ ಸಂಸ್ಥಾನ, ದೆಹಲಿ |
| 14. | **ಡಾ. ಗಣಪತಿ ಭಟ್**<br>ಸಹಾಯಕ ಪ್ರಾಧ್ಯಾಪಕರು<br>ಶ್ರೀ ರಾಘವೇಂದ್ರ ಭಾರತೀ ಸವೇದ ಸಂಸ್ಕೃತ ಕಾಲೇಜು<br>ಸುಬ್ರಹ್ಮಣ್ಯ, ಸುರಕಟ್ಟೆ ಅಂಚೆ, ಹೊನ್ನಾವರ ತಾ<br>ಉತ್ತರಕನ್ನಡ ಜಿಲ್ಲೆ | **ಅಲಂಕಾರಶಾಸ್ತ್ರ** | | ರಾಷ್ಟ್ರೀಯ ಸಂಸ್ಕೃತ ವಿದ್ಯಾಪೀಠ, ತಿರುಪತಿ |
| 15. | **ಡಾ. ಹೆಚ್.ಕೆ. ಸುರೇಶಾಚಾರ್ಯ**<br>ಪ್ರಾಚಾರ್ಯರು, ಎಸ್.ಎಂ.ಎಸ್.ಪಿ. ಸಂಸ್ಕೃತ ಕಾಲೇಜು,<br>ಉಡುಪಿ | **ಅಲಂಕಾರಶಾಸ್ತ್ರ** | 1996 | ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು |
| 16. | **ಡಾ. ಎನ್. ಲಕ್ಷ್ಮೀನಾರಾಯಣ ಭಟ್**<br>ಪ್ರಾಧ್ಯಾಪಕರು, ಎಸ್.ಎಂ.ಎಸ್.ಪಿ. ಸಂಸ್ಕೃತ ಕಾಲೇಜು, ಉಡುಪಿ | **ಅಲಂಕಾರಶಾಸ್ತ್ರ** | 2000 | ರಾಷ್ಟ್ರೀಯ ಸಂಸ್ಕೃತ ವಿದ್ಯಾಪೀಠ, ತಿರುಪತಿ |
| 17. | **ಡಾ. ನಾಗೇಶ ಭಟ್ ಕೆ.ಸಿ**<br>ಉಪನ್ಯಾಸಕರು ಭಾರತಿಯ ಜ್ಯೋತಿವಿಧಾಮ<br>ಶ್ರೀಮಾತಾ ಸಂಸ್ಕೃತ ಪಾಠಶಾಲೆ<br>ಉಮ್ಮಚಗಿ, ಯಲ್ಲಾಪುರ ತಾಲ್ಲೂಕು | **ಜ್ಯೋತಿಷ್ಯ ಶಾಸ್ತ್ರ** | 2007 | ರಾಷ್ಟ್ರೀಯ ಸಂಸ್ಕೃತ ವಿದ್ಯಾಪೀಠ, ತಿರುಪತಿ |
| 18. | **ಡಾ. ಎಸ್. ರಂಗನಾಥ್,**<br>ಸಂಸ್ಕೃತ ವಿಭಾಗಾಧ್ಯಕ್ಷರು<br>ಎನ್.ಎಂ.ಕೆ.ಆರ್.ವಿ. ಕಾಲೇಜು, ಜಯನಗರ 3ನೇ ಬ್ಲಾಕ್,<br>ಬೆಂಗಳೂರು – 560011 | **ಅದ್ವೈತವೇದಾಂತಶಾಸ್ತ್ರ** | 1995 | ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು |
| 19. | **ಡಾ. ಎ.ವಿ. ನಾಗಸಂಪಿಗೆ**<br>ನಿರ್ದೇಶಕರು, ಪೂರ್ಣಪ್ರಜ್ಞ ಸಂಶೋಧನ ಮಂದಿರ, ಕತ್ತರಿಗುಪ್ಪೆ<br>ಮುಖ್ಯರಸ್ತೆ, ಬೆಂಗಳೂರು – 560028.<br>ಮೊಬೈಲ್: 99020 93418 | **ದ್ವೈತವೇದಾಂತಶಾಸ್ತ್ರ** | 2008 | ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ,<br>ಮೈಸೂರು |
| 20. | **ಡಾ. ಸಂತಪ್ಪನವರ ಪಿ.ಬಿ.**<br>ಸಂಸ್ಕೃತ ಪ್ರಾಧ್ಯಾಪಕರು<br>ಸಂಸ್ಕೃತ ವಿಭಾಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ,<br>ಮೊ: 98806–53161 | **ಸಂಸ್ಕೃತ–ಪ್ರಾಕೃತ** | 1993 | ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ |
| 21. | **ಡಾ. ಟಿ.ಎಸ್. ಸತ್ಯವತಿ**<br>ಸಂಸ್ಕೃತ ಪ್ರಾಧ್ಯಾಪಕರು<br>ವಿದ್ಯಾವರ್ಧಕ ಸಂಘ ಪದವಿ ಮಹಿಳಾ ಕಾಲೇಜು,<br>ಬಸವೇಶ್ವರನಗರ, ಬೆಂಗಳೂರು<br>ಮೊ: 98455–83229 | **ಸಾಹಿತ್ಯ** | 2002 | ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು |
| 22. | **ಡಾ. ಎಚ್.ಆರ್. ವಿಶ್ವಾಸ್**<br>'ವಿಪಾಶಾ' # 99ಬಿ, 'ಲ್ಯಾಂಡ್‌ಲಿಂಕ್ ಟೌನ್‌ಶಿಪ್'<br>ನವನಗರ, ದೇರೆಬೈಲು<br>ಕೊಂಚಾಡಿ, ಮಂಗಳೂರು – 575 008 | **ಅಲಂಕಾರಶಾಸ್ತ್ರ** | 1995 | ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ |
| 23. | **ಡಾ. ಭಗವಂತ ಲಕ್ಷ್ಮಣ ನಡೋಣಿ**<br>ಸಂಸ್ಕೃತ ಪ್ರಾಧ್ಯಾಪಕರು, ಸಂಸ್ಕೃತ ವಿಭಾಗ,<br>ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ | | 1995 | ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ |
| 24. | **ಡಾ. ನಾಗರತ್ನ ಹೆಗಡೆ**<br>ಅಧ್ಯಾಪಕರು, ಸುರಾನಾ ಪದವಿ ಕಾಲೇಜು<br>ಸೌತ್ ಅಂಡ್ ರಸ್ತೆ, ಬಸವನಗುಡಿ, ಬೆಂಗಳೂರು–04 | **ಅಲಂಕಾರಶಾಸ್ತ್ರ** | 2006 | ರಾಷ್ಟ್ರೀಯ ಸಂಸ್ಕೃತ ವಿದ್ಯಾಪೀಠ ತಿರುಪತಿ |
| 25. | **ಪ್ರೊ. ಶ್ರೀನಿವಾಸ ವರಖೇಡಿ**<br>ಡೀನ್–ಭಾಷಾ ನಿಕಾಯ<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ<br>ಚಾಮರಾಜಪೇಟೆ, ಬೆಂಗಳೂರು | **ನ್ಯಾಯಶಾಸ್ತ್ರ**<br>**ಶಾಬ್ದಬೋಧ** | 2004 | ರಾಷ್ಟ್ರೀಯ ಸಂಸ್ಕೃತ ಸಂಸ್ಥಾನ್<br>ನವದೆಹಲಿ |
| 26. | **ಪ್ರೊ. ಎಂ.ಕೆ. ಶ್ರೀಧರ್**<br>ಉಪನಿರ್ದೇಶಕರು–ಪ್ರಸಾರಾಂಗ<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ<br>ಚಾಮರಾಜಪೇಟೆ, ಬೆಂಗಳೂರು | **ದರ್ಶನ** | 1995 | ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು |

ನಿರ್ಣಯ: **ಸಭೆಯು ಪಟ್ಟಿಯನ್ನು ಪರಿಶೀಲಿಸಿ ಸೂಕ್ತ ರೀತಿಯಿಂದ ಕ್ರಮವಹಿಸಲು ಮಾನ್ಯ ಕುಲಪತಿಗಳಿಗೆ ಸೂಚಿಸಿತು.**

**ಪ್ರೊ. ವೈ.ಎಸ್. ಸಿದ್ದೇಗೌಡ**
ಸದಸ್ಯ ಕಾರ್ಯದರ್ಶಿ

**ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ**
ಅಧ್ಯಕ್ಷರು